## ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.17/2022

ಪಿ.ಡಬ್ಲ್ಯೂಃ7

ಸಿಡಬ್ಲ್ಯೂ-11

ಸಾಕ್ಷಿದಾರರ ಹೆಸರು : ಮಂಜುನಾಥ ಗಿಡ್ಡಪ್ಪ ನಾವಿ

ತಂದೆಯ ಹೆಸರು : ಗಿಡ್ಡಪ್ಪ ನಾವಿ

ವಯಸ್ಸು : 49 ವರ್ಷ

ಉದ್ಯೋಗ : ಉಪ ಅರಣ್ಯ ಸಂರಕ್ಷಣಾಧಿಕಾರಿ , ಸಾಮಾಜಿಕ ಅರಣ್ಯ , ಕಾರವಾರ

ವಾಸ : ಕಾರವಾರ

ದಿನಾಂಕಃ 26-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ .ಸ. ಅ ರವರಿಂದ ಃ**

1. ನಾನು ಅಂಕೋಲಾದಲ್ಲಿ ಜೂನ 2020 ರಿಂದ ಎಪ್ರಿಲ್ 2022 ತನಕ ಅಂಕೋಲಾ ಉಪ ವಿಭಾಗದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದೇನೆ .

2. ದಿಃ14-8-2020 ಕ್ಕೆ ಪ್ರ.ವ.ವ ಸಂಖ್ಯೆ 3/2020-21 ಕ್ಕೆ ಒಂದು ಗುನ್ನೆ ದಾಖಲು ಆಗಿರುತ್ತದೆ . ಅಂಕೊಲಾ ತಾಲೂಕಿನ ನವಗದ್ದೆ ಗ್ರಾಮ ಅರಣ್ಯ ಸರ್ವೆ ನಂಬರ 26 ರ ಹತ್ತಿರ ರಾಷ್ಟ್ರೀಯ ಹೆದ್ದಾರಿ 63 ರಲ್ಲಿ ಕಡವೆ ಮಾಂಸ ಸಾಗಾಟ ಮಾಡುತ್ತಿದ್ದ ಬಗ್ಗೆ ಗುನ್ನೆ ದಾಖಲು ಆಯಿತು ಸಿಬ್ಬಂದಿಗಳಾದ ಚಾಸಾ -1 ರವರು ,ಚಾಸಾ-5 ರಿಂದ 7 ರವರು ಕಡವೆ ಮಾಂಸ ಸಾಗಾಟ ಮಾಡುತ್ತಿದ್ದ 2 ಮತ್ತು 3 ನೇ ಆರೋಪಿತರನ್ನು ಕಡವೆ ಮಾಂಸದ ಸಮೇತ ಹಾಗೂ ಬೈಕ ಸಮೇತ ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ಸದ್ರಿ ಅರಣ್ಯ ಇಲಾಖಾ ಸಿಬ್ಬದಿಗಳು 2 ಮತ್ತು 3 ನೇ ಆರೋಪಿತರನ್ನು ವಿಚಾರಿಸಿದಾಗ 1 ನೇ ಆರೋಪಿಯು ಕಡವೆ ಮಾಂಸವನ್ನು ಮಾಡಿ ಮಾರಾಟ ಮಾಡುವ ಪ್ರಯತ್ನ ಮಾಡಿರುತ್ತಾರೆ ಎಂದು ತಿಳಿಸಿದ ಹೇಳಿಕೆಯ ಆಧಾರದಲ್ಲಿ 1 ನೇ ಆರೋಪಿಯ ಮನೆಗೆ ಹೋಗಿ ಅಲ್ಲಿ ಹುಡುಕಾಡಿದಾಗ ಅಲ್ಲೆ ಇರುವ ಹಳ್ಳದ ಬಳಿಯಲ್ಲಿ 1 ನೆ ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿರುತ್ತದೆ . 1 ನೆ ಆರೋಪಿ ನಂತರರದಲ್ಲಿ ತಾನು ಕಡವೆಯನ್ನು

ಕೊಂದ ಸ್ಥಳವನ್ನು ತೋರಿಸಿರುತ್ತಾರೆ ಹಾಗೂ ಸದ್ರಿ ಕೃತ್ಯಕ್ಕೆ ಉಪಯೋಗಿಸಿದ ಬಂದೂಕನ್ನು ಮಾಲ್ಕಿ ಜಾಗದ ತೆಂಗಿನ ಮರದ ಬುಡದಲ್ಲಿ ಹುಗಿದು ಇಡಲಾಗಿರುತ್ತದೆ ನಂತರ ಅದನ್ನು ಸಹ 1 ನೇ ಆರೋಪಿ ತೋರಿಸಿದ್ದು ಅರಣ್ಯ ಸಿಬ್ಬಂದಿಗಳು ವಶಕ್ಕೆ ಪಡೆದುಕೊಂಡಿರುತ್ತಾರೆ ಕೊಂದ ಕಡವೆಯ ತಲೆ , ಸತ್ತ ಭ್ರೂಣ ಕರಳುಗಳು ಹರಿಯುವ ಹಳ್ಳದಲ್ಲಿ ಹುಗಿದಿಡಲಾಗಿರುತ್ತದೆ. ಅದನ್ನು ಸಹ ಸಿಬ್ಬಂದಿಗಳಿಗೆ 1 ನೇ ಆರೋಪಿ ತೋರಿಸಿರುತ್ತಾನೆ. ಬಂದೂಕನ್ನು 4 ನೇ ಆರೋಪಿಯು ನೀಡಿರುತ್ತಾನೆ ಎಂದು ಹೇಳಿರುತ್ತಾನೆ . ಹಾಗೂ 3 ನೇ ಆರೋಪಿ ಈ ಪ್ರಕರಣದಲ್ಲಿ ಸಹಕಾರ ನೀಡಿ ಬಾಗಿ ಯಾಗಿರುತ್ತಾನೆ ಎಂದು ತಿಳಿಸಿರುತ್ತಾನೆ . ನಂತರ ಪಶು ವೈದ್ಯಾಧಿಕಾರಿಯನ್ನು ಸ್ಥಳಕ್ಕೆ ಕರೆಸಿ ಶ್ಯಾಂಪಲ್ ಗಳನ್ನು ಪಡೆಯಲಾಗಿದ್ದು , ದಸ್ತಗಿರಿ ಮಾಡಿದ 3 ಆರೋಪಿಗಳು ಮತ್ತು ವಶಪಡಿಸಿಕೊಳ್ಳಲಾದ ಮಾಲುಗಳ ಸಮೇತ ಸದ್ರಿ ಮೇಲ್ಕಂಡ ಅರಣ್ಯ ಸಿಬ್ಬಂದಿಗಳು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ . ನ್ಯಾಯಾಲಯದ ಮುಂದೆ ಇರುವ 1 ರಿಂದ 3 ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ನ್ಯಾಯಾಲಯದ ಮುಂದೆ ಇರುವ ಈಗಾಗಲೆ ಗುರುತಿಸಲಾಗಿರುವ ಮು.ಮಾ-3 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾನೆ . ನಿಪಿ-2 ರಿಂದ 5 ರಲ್ಲಿ ಇರುವ ಪೊಟೊವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ನಿಪಿ-2 ರಿಂದ 5 ರಲ್ಲಿ ಇರುವ ಪೊಟೊವನ್ನು ಸಾಕ್ಷಿ ನೋಡಿ ಗುರುತಿಸಿರುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಎತ್ತಿರುತ್ತಾರೆ ಸಾಕ್ಷಿಗೆ ನಿಪಿ-8 ರಿಂದ 13 ರ ಪೊಟೊವನ್ನು ತೋರಿಸಲಾಗಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ . ಈ ಬಗ್ಗೆ ಆರೋಪಿ ಪರ ವಕೀಲರು ತಕರಾರನ್ನು ಎತ್ತಿರುತ್ತಾರೆ .

3. ನಂತರ ದಲ್ಲಿ ನಾನು ಸದ್ರಿ- 3 ಜನ ಆರೋಪಿತರನ್ನು ಕಚೇರಿಯಲ್ಲಿ ವಿಚಾರಣೆ ಗೆ ಒಳಪಡಿಸಿರುತ್ತೇನೆ ನಂತರ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಅವರ ಸಂಬಂಧಿಕರಿಗೆ ತಿಳುವಳಿಕೆ ನೀಡಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರ ಪಡಿಸಿರುತ್ತೇನೆ . ನಂತರ ತಲೆ ಮರೆಸಿಕೊಂಡ 4 ಮತ್ತು 5 ನೆ ಆರೋಪಿತರ ಶೋಧನಾ ಕಾರ್ಯ ಮಾಡಿರುತ್ತೇನೆ. ವಶ ಪಡಿಸಿಕೊಂಡ ಕಡವೆಯ ತಲೆ , ಕಾಲು , ಚರ್ಮ ಹಾಗೂ ಸತ್ತ ಬ್ರೂಣ ಇವುಗಳನ್ನು ನಾಯಾಲಯದ ಮುಂದೆ ಹಾಜರು ಪಡಿಸಿ ಅವುಗಳನ್ನು ವಿಲೇವಾರಿ ಮಾಡಲು ಅನುಮತಿ ಯನ್ನು ಪಡೆದುಕೊಂಡಿರುತ್ತೇನೆ. ನ್ಯಾಯಾಲಯ ನೀಡಿದ ಆದೇಶದ ಪ್ರಕಾರ ದಿಃ

17-8-2020 ರಂದು ನನ್ನ ಸಮಕ್ಷಮ ದಲ್ಲಿ ಹಾಗೂ ಪಂಚರ ಸಮಕ್ಷಮ ದಲ್ಲಿ ಸಿಬ್ಬಂದಿಗಳೊಂದಿಗೆ ಕ್ರಮ ಬದ್ಧವಾಗಿ ಅವುಗಳನ್ನು ಸುಟ್ಟು ವಿಲೇವಾರಿ ಮಾಡಿರುತ್ತೇವೆ . ಸಾಕ್ಷಿಗೆ ಈಗಾಗಲೆ ಗುರುತಿಸಲಾದ ನಿಪಿ-20 ನ್ನು ತೋರಿಸಲಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುವುದರಿಂದ ಸದ್ರಿ ಸಾಕ್ಷಿದಾರರ ಸಹಿಯನ್ನು ನಿಪಿ-20 (ಇ) ಎಂದು ಗುರುತಿಸಲಾಯಿತು . ಸಾಕ್ಷಿಗೆ 5 ಪೊಟೊಗಳನ್ನು ತೋರಿಸಲಾಗಿದ್ದು ಅವುಗಳನ್ನು ಈಗಾಗಲೆ ನಿಪಿ-21 ರಿಂದ 25 ಎಂದು ಗುರತಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ಸದ್ರಿ ಪೊಟೊಗಳನ್ನು ಆ ವಶ ಪಡಿಸಿಕೊಳ್ಳಲಾದ ಕಡವೆಯ ತಲೆ ,ಕಾಲು, ಚರ್ಮ ಮತ್ತು ಭ್ರೂಣ ಹಾಗೂ ಕರುಳನ್ನು ವಿಲೇವಾರಿ ಮಾಡುವ ಸಮಯದಲ್ಲಿ ತೆಗೆಯಲಾಗಿರುವ ಪೊಟೊವನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ಸಂಗ್ರಹಿಸಿದ ಶ್ಯಾಂಪಲ್ಗಳನ್ನು ದಿಃ18-8-2020 ರಂದು ಹೈದರಾಬಾದ ಸಿ.ಸಿ.ಎಮ್ .ಬಿ ಗೆ ಕಳುಹಿಸಿಕೊಟ್ಟಿರುತ್ತೇವೆ . 4 ನೆ ಆರೊಪಿ ದೈಹಿಕ ಶಿಕ್ಷಕರು ಆಗಿರುವುದರಿಂದ ಅವರನ್ನು ವಿಚಾರಣೆಗೆ ಹಾಜರು ಪಡಿಸುವಂತೆ ಸಂಬಂದಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗೆ ಪತ್ರ ಬರೆದಿರುತ್ತೇವೆ . ಅದೇ ದಿವಸ ಪೋಲಿಸ್ ನಿರೀಕ್ಷಕರಿಗೂ ಸಹ ಸದ್ರಿ ಬಂದೂಕಿನ ಲೈಸೆನ್ಸ ಹಾಜರು ಪಡಿಸುವಂತೆ ಪತ್ರ ಬರೆದಿರುತ್ತೇವೆ .

4. ನಂತರ ನಾನು ನನ್ನ ಮೇಲಾಧಿಕಾರಿಗಳಿಗೆ ಈ ಪ್ರಕರಣದ ಬಗ್ಗೆ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ಏನೆಲ್ಲಾ ನಡೆಯಿತು ಎಂದು ವರದಿ ಕಳುಹಿಸಿಕೊಟ್ಟಿರುತ್ತೇನೆ . ಸದ್ರಿ ಪ್ರಕರಣದಲ್ಲಿ ವಶಕ್ಕೆ ಪಡೆದುಕೊಳ್ಳಲಾದ ಬಂದೂಕು ಲೊಡೆಡ್ ಬಂದುಾಕು ಆಗಿದ್ದು ಅದನ್ನು ಅನ್ ಲೋಡ ಮಾಡಿಕೊಂಡು ಪೋಲಿಸ ವರಿಷ್ಟಾಧಿಕಾರಿಗಳಿಗೆ ಮಾನ್ಯ ಉಪ ಅರಣ್ಯಾಧಿಕಾರಿ ಕಾರವಾರ ರವರ ಮುಖಾಂತರ ಕೋರಿಕೊಂಡಿರುತ್ತೇವೆ . ನಂತರ ದೈಹಿಕ ಶಿಕ್ಷಕರಾದ 4 ನೆ ಆರೋಪಿಗೆ ಜಾಮಿನು ನೀಡಬಾರದು ಎಂದು ನ್ಯಾಯಾಲಯದಲ್ಲಿ ವರದಿ ಹಾಕಿರುತ್ತೇವೆ . ಸದ್ರಿ ದಿಃ 17-8-2020 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗೆ ಬರೆದ ಪತ್ರ ಸಾಕ್ಷಿಗೆ ತೋರಿಸಲಾಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ನಿಪಿ-28 ಎಂದು , ಸಾಕ್ಷಿ ಸಹಿಯನ್ನು ನಿಪಿ-28 (ಎ )ಎಂದು ಗುರುತಿಸಲಾಯಿತು. ಅದೇ ರೀತಿ ದಿಃ18-8-2020 ರಂದು ಪೋಲಿಸ ವೃತ್ತ ನೀರಿಕ್ಷಕರಿಗೆ ಬರೆದ ಪತ್ರ ವನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-29 ಎಂದು , ಸಾಕ್ಷಿ

ಸಹಿಯನ್ನು ನಿಪಿ-29 (ಎ) ಎಂದು ಗುರುತಿಲಾಯಿತು . ನಂತರ ಅದೇ ದಿವಸ ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಂತಹ ಚಾಸಾ-1 ರಿಂದ 7 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ 5. ದಿಃ27-8-2020 ರಂದು 5 ನೆ ಆರೋಪಿಗೆ ಜಾಮಿನು ನೀಡಬಾರದು ಎಂದು ಮಾನ್ಯ ನ್ಯಾಯಾಲಯಕ್ಕೆ ವರದಿ ನೀಡಿರುತ್ತೇನೆ . 5. ದಿಃ19-9-2020 ರಂದು 4 ನೆ ಆರೋಪಿಗೆ ವಿಚಾರಣೆ ಹಾಜರು ಆಗುವಂತೆ ನೋಟಿಸು ನೀಡಿರುತ್ತೇನೆ .ದಿಃ 24-9-2020 ರಂದು 5 ನೇ ಆರೋಪಿಗೆ ವಿಚಾರಣೆಗೆ ಹಾಜರ ಆಗುವಂತೆ ನೋಟಿಸು ನೀಡಿರುತ್ತೇನೆ . ಸ್ದ್ರಿ 2 ನೋಟಿಸುಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ನಿಪಿ-30 ಮತ್ತು 31 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-30 (ಎ) ಮತ್ತು 31 (ಎ) ಎಂದು ಗುರುತಿಸಲಾಯಿತು . ದಿಃ 29-9-2020 ರಂದು ಗನ್ ವನ್ನು ಅನ ಲೋಡ್ ಮಾಡಲು ಜಿಲ್ಲಾ ಸಶ್ತ್ರಗಾರ ಕಾರವಾರ ಚಾಸಾ-9 ರವರು ಬಂದಿರುತ್ತಾರೆ . ಅವರ ಸಮಕ್ಷಮದಲ್ಲಿ ಪಂಚನಾಮೆ ಕ್ರಮ ಜರುಗಿಸಿ ನಂತರ ಗನ್ ವನ್ನು ಅನ್ ಲೋಡ್ ಮಾಡುವ ಕ್ರಮ ಜರುಗಿಸಿರುತ್ತೇವೆ . ಸ್ದ್ರಿ ಗನ ವನ್ನು ಅನ್ ಲೋಡ್ ಮಾಡುವ ಸಮಯದಲ್ಲಿ ಮಾಡಲಾದ ಪಂಚನಾಮೆ ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿ ಯನ್ನು ನೋಡಿ ಗುರುತಿಸಿರುವುದರಿಂದ ನಿಪಿ-26 (ಎಫ್) ಗುರುತಿಸಲಾಯಿತು .

6. ದಿಃ 29-9-2020 ರಂದು 4 ಮತ್ತು 5 ನೇ ಅರೋಪಿತರು ನಾನು ಕೊಟ್ಟ ನೋಟಿಸಿನ ಪ್ರಕಾರವಾಗಿ ವಿಚಾರಣೆಗಾಗಿ ನನ್ನ ಮುಂದೆ ಹಾಜರಾಗಿರುತ್ತಾರೆ . ನನ್ನ ಮುಂದೆ ವಿಚಾರಣೆಗಾಗಿ ಹಾಜರಾದ 4 ಮತ್ತು 5 ನೇ ಆರೋಪಿತರು ನ್ಯಾಯಾಲಯದ ಮುಂದೆ ಈ ದಿನ ಇರುತ್ತಾರೆ . ಸಾಕ್ಷಿ ಸ್ದ್ರಿ 4 ಮುತ್ತು 5 ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ .

7. ದಿಃ 28-10-2020 ರಂದು ಸಿ.ಸಿ.ಎಮ್ .ಬಿ ಹೈದರಾಬಾದ ದಿಂದ ಬಂದ ರಿಪೋರ್ಟವನ್ನು ನಾನು ಸ್ವೀಕರಿಸಿರುತ್ತೇನೆ . ಸ್ದ್ರಿ ಸಿ.ಸಿ.ಎಮ್ .ಬಿ ರಿಪೋರ್ಟವನ್ನು ನಾನು ನೋಡಿದರೆ ಗುರುತಿಸುತ್ತೇನೆ . ಸ್ದ್ರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ನಿಪಿ-32 ಎಂದು ಗುರುತಿಸಲಾಯಿತು. ಅದರ ಬಗ್ಗೆ ಹಾಕಿರುವ ಸ್ವಿಕೃತಿಯನ್ನು ಸಾಕ್ಷಿ ನೋಡಿ ಗುರುತಿಸಿರವುದರಿಂದ ನಿಪಿ-32 (ಎ) ಎಂದು ಗುರುತಿಸಲಾಯಿತು . ದಿಃ 29-10-2020 ರಂದು ಪೋಲಿಸ ವೃತ್ತ ನಿರೀಕ್ಷಕರು ಬಂದೂಕು ಲೈಸೆನ್ಸ ಹೊಂದಿದವರು ಯಾರು

ಎಂದು ಅದರ ಬಗ್ಗೆ ಲಿಸ್ಟ ಕಳುಹಿಸಿದ್ದು ಸದ್ರಿ ಪತ್ರ ಮತ್ತು ಲಿಸ್ಟ ವನ್ನು ಒಟ್ಟಾರೆಯಾಗಿ ನಿಪಿ–33 ಎಂದು , ಅದರ ಮೇಲಿರುವ ಸಾಕ್ಷಿದಾರರ ಕಚೇರಿ ಸ್ವಿಕೃತಿ ನಿಪಿ–33( ಎ) ಎಂದು ಗುರುತಿಸಲಾಯಿತು .

8. ದಿಃ 7–12–2020 ರಂದು ಎಫ್ ಎಸ್ ಎಲ್ ಮಡಿವಾಳ ಬೆಂಗಳೂರು ರವರಿಗೆ ಕಳುಹಿಸಲು ಜಪ್ತು ಪಡಿಸಿದ ಬಂದೂಕು ಹಾಗೂ ಸತ್ತ ಪ್ರಾಣಿಯ ಚರ್ಮ ,ಗಾಯವಾದ ಭಾಗದ ಚರ್ಮ ಹಾಗೂ ಆರೋಪಿಗಳ ಉಗುರಿನ ಮಾದರಿಯನ್ನು ಕಳುಹಿಸಲು ನಾವು ಅವುಗಳನ್ನು ಪ್ಯಾಕ್ ಮಾಡಿ ಶೀಲು ಮಾಡಿ ಮಹಜರ ಕ್ರಮ ಜರುಗಿಸಿರುತ್ತೇವೆ . ಸದ್ರಿ ಮಹಜರನ ಮೂಲ ಪ್ರತಿಯನ್ನು ಎಪ.ಎಸ್. ಎಲ್ ನೊಂದಿಗೆ ಕಳುಹಿಸಿಕೊಡಲಾಗಿರುತ್ತದೆ . ಜೆರಾಕ್ಸ ಪ್ರತಿಯನ್ನು ಕಡತದಲ್ಲಿ ಅಳವಡಿಸಲಾಗಿರುತ್ತದೆ . ಸದ್ರಿ ದಾಖಲಾತಿ ಜೆರಾಕ್ಸ ಪ್ರತಿ ಇರುವುದರಿಂದ ನಿಶಾನೆಗೊಳಪಡಿಸಿರುವುದಿಲ್ಲ .

9. ದಿಃ 17–8–2021 ರಂದು ನಿರ್ದೇಶಕರು ಎಪ. ಎಸ.ಎಲ್ ಮಡಿವಾಳ ರವರಿಂದ ಪರೀಕ್ಷಾ ವರದಿ ಬಂದಿದ್ದು ಅದನ್ನು ಸ್ವಿಕರಿಸಲಾಗಿರುತ್ತದೆ . ನಾವು ಎಪ ಎಸ್ ಎಲ್ ಮಡಿವಾಳ ಬೆಂಗಳೂರಿಗೆ ಕಳುಹಿಸಿದ ಕೋರಿಕೆ ಪತ್ರ ಹಾಗೂ ಸೂಚನಾ ಪತ್ರವನ್ನು ನೋಡಿ ಗುರುಸಿರುತ್ತೇನೆ . ಸದ್ರಿ ಕೋರಿಕೆ ಹಾಗೂ ಸೂಚನಾ ಪತ್ರ ನಿಪಿ–34 ಮತ್ತು 35 ಎಂದು , ಸಾಕ್ಷಿ ಸಹಿಯನ್ನು ನಿಪಿ–34 (ಎ) ಮತ್ತು 35 (ಎ) ಎಂದು ಗುರುತಿಸಲಾಯಿತು . ಸದ್ರಿ ದಿಃ 15–8–2021 ರಂದು ಚಾಸಾ –1 ರವನ್ನು ಪರಿಕ್ಷಾ ವರದಿಯನ್ನು ವಿಧಿವಿಜ್ಞಾನ ಪ್ರಯೋಗಾಲಯ ಬೆಂಗಳೂರು ರವರಿಂದ ತಾಬಾ ಗೆ ಪಡೆದುಕೊಳ್ಳಲು ಕಳುಹಿಸಿಕೊಟ್ಟ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ನಿಪಿ–36 ಎಂದು , ಸಾಕ್ಷಿಯ ಸಹಿಯನ್ನು ನಿಪಿ–36 (ಎ) ಎಂದು ಗುರುತಿಸಲಾಯಿತು . ಎಪ ಎಸ ಎಲ್ ವರದಿಯನ್ನು ನಿಪಿ–37 ಎಂದು, ಕಚೇರಿಯ ಸ್ವಿಕೃತಿಯನ್ನು ನಿಪಿ–37 (ಎ) ಎಂದು ಗುರುತಿಸಲಾಯಿತು .

10. ದಿಃ 01–12–2021 ರಂದು 4 ನೇ ಅರೋಪಿಗೆ ವಿಚಾರಣೆ ಗೆ ಹಾಜರಾಗಲು ನೀಡಲಾದ ನೋಟಿಸು ನ್ನು ಸಾಕ್ಷಿ ನೋಡಿ ಗುರುತಿಸಿರುವುರಿಂದ ನಿಪಿ–38 ಎಂದು , ಸಾಕ್ಷಿ ಸಹಿಯನ್ನು ನಿಪಿ–38 (ಎ) ಎಂದು, ದಿಃ 4–12–2021 ರಂದು ನನ್ನ ಮುಂದೆ ಹಾಜರಾಗಿ ನೀಡಿದ ಸ್ವಖುಷಿ ಹೇಳಿಕೆ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–39 ಮತ್ತು ಸಾಕ್ಷಿ ಸಹಿಯನ್ನು ನಿಪಿ–39 (ಎ) ಎಂದು ಗುರುತಿಸಲಾಯಿತು . ದಿಃ

7-1-2022 ರಂದು 5 ನೆ ಆರೋಪಿಗೆ ವಿಚಾರಣೆ ಹಾಜರಾಗಲು ನೀಡಲಾದ ನೋಟಿಸನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ನಿಪಿ-40 ಎಂದು , ಸಾಕ್ಷಿ ಸಹಿಯನ್ನು ನಿಪಿ-40(ಎ ) ಎಂದು ,ದಿಃ 13-1-2022 ರಂದು 5 ನೆ ಅರೋಪಿಯು ನನ್ನ ಮುಂದೆ ವಿಚಾರಣೆ ಗೆ ಹಾಜರಾಗಿ ನೀಡಲಾದ ಸ್ವಖುಷಿ ಹೇಳಿಕೆಯನ್ನು ನಿಪಿ-41 ಎಂದು ಸಾಕ್ಷಿಯ ಸಹಿಯನ್ನು ನಿಪಿ-41 (ಎ) ಎಂದು ಗುರುತಿಸಲಾಯಿತು .

**11**. ದಿಃ14-8-2020 ರಂದು ಸದ್ರಿ 1 ರಿಂದ 3 ನೇ ಅರೋಪಿತರು ನನ್ನ ಮುಂದೆ ಸ್ವಖುಷಿ ಹೇಳಿಕೆ ನೀಡಿರುತ್ತಾರೆ . ಸದ್ರಿ 3 ಸ್ವಖುಷಿ ಹೇಳಿಕೆಯನ್ನು ಸಾಕ್ಷಿ ನೋಡಿರುವುದರಿಂದ ನಿಪಿ-42 ರಿಂದ 44 ಎಂದು ಸಾಕ್ಷಿ ಸಹಿಯನ್ನು ನಿಪಿ-42 (ಎ) ಯಿಂದ 44 (ಎ) ಎಂದು ಗುರುತಿಸಲಾಯಿತು . ತನಿಖೆಯನ್ನು ನಾನು ಕೈಗೊಂಡು ಈ ಎಲ್ಲಾ ಅರೋಪಿತರು ಸದ್ರಿ ಅಪರಾಧವನ್ನು ಎಸಗಿರುತ್ತಾರೆ ಎಂದು ನನ್ನ ತನಿಖೆ ಕಾಲಕ್ಕೆ ಸಾಬಿತು ಆಗಿರುವುದರಿಂದ ನಾನು ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ದ ಮುಂದೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.